ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 145-153
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಅಕಥ ಕಥಾ: ಮನುಷ್ಯ ಚೇತನವನ್ನು ಕಟ್ಟುವಿಕೆಯ ಪರಿಕಲ್ಪನೆ

**ಅಕ್ಷಿತ ಎಂ. ಎಂ**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

***Abstract:***
*ಕೇಶವ ಮಳಗಿ ಅವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿ ರಚಿಸಿದ್ದಾರೆ. ಸುಮಾರು 25ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ರಚಿಸಿ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೆ ಆದ ಕೊಡುಗೆ ನೀಡಿದ್ದಾರೆ. ಇವರ ಬರಹಗಳು ವಿಶಿಷ್ಟತೆಯಿಂದ ಕೂಡಿವೆ. ಕೇಶವ ಮಳಗಿಯವರ 'ಅಕಥ ಕಥಾ' ಸಂಕಲನದಲ್ಲಿ ನಿರಂತವಾದ ಚಲನೆಯಿದೆ. ಲೌಕಿಕದ ಮಿತಿಗಳನ್ನು ದಾಟಿ ಆಧ್ಯಾತ್ಮದ ನೆಲೆಯನ್ನು ಅರಸುವ ಕ್ರಿಯೆ ಈ ಸಂಕಲನದಲ್ಲಿದೆ. 'ಸಂತ' ಎಂದರೆ ಸಂಸ್ಕೃತದಲ್ಲಿ ಸತ್ ಎಂದರ್ಥ. ಇದರರ್ಥ ಸತ್ಯ, ವಾಸ್ತವ. ಸಂತ ಎಂದರೆ ಸೌಖ್ಯ; ಕ್ಷೇಮ, ಶಾಂತ ರೀತಿಯಲ್ಲಿ ಒಪ್ಪಂದ; ಸಂಧಾನ. ಸಾತ್ವಿಕ ಸ್ವಭಾವದ ವ್ಯಕ್ತಿ; ಸಾಧು. ಭಕ್ತಿಮಾರ್ಗವನ್ನು ಅನುಸರಿಸುವವನು, ಭಕ್ತಿಪಂಥದ ಅನುಯಾಯಿ, ಶಾಂತವಾದ; ಸಮಾಧಾನದಿಂದ ಕೂಡಿದ. ಗೌರವಾರ್ಹವಾದ, ಪೂಜ್ಯವಾದ ಎಂಬ ಮುಂತಾದ ಅರ್ಥಗಳು ಕನ್ನಡ ಸಂಕ್ಷಿಪ್ತ ನಿಘಂಟಿನಲ್ಲಿವೆ. ಈ 'ಸಂತ'ತನವನ್ನು ನಿರ್ದಿಷ್ಟವಾಗಿ ವ್ಯಾಖ್ಯಾನಿಸುವುದು ಕಷ್ಟ. ಬಹುಮುಖಿಯಾದ ಸತ್ಯ ಇದಾಗಿದೆ. ಈ 'ಸತ್ಯ' ಭಿನ್ನ ದೃಷ್ಟಿಕೋನಗಳಿಂದ ರೂಪುಗೊಂಡಿದೆ. ಇಲ್ಲಿ ಸತ್ಯವೆಂದರೆ ನಿರಂತರ ಬದಲಾವಣೆ. ಈ ಬದಲಾವಣೆ ಕಾಲ–ಪರಿಸರ ತಕ್ಕ ಹಾಗೆ ನಿರಂತರವಾಗಿ ಜರಗುತ್ತಿರುತ್ತದೆ. ವರ್ತಮಾನದಲ್ಲಿ ಕಂಡ ಸತ್ಯ ಮುಂದೆ ಬದಲಾಗಬಹುದು ಅಥವಾ ಸುಳ್ಳಾಗಬಹುದು. ಇನ್ನೊಂದು ಹಂತದ ಎತ್ತರಕ್ಕೆ ಒಯ್ಯಲು ದಾರಿಯಾಗಬಹುದು. ಆದರೆ ನಿರಂತರ ಬದಲಾವಣೆ ಮಾತ್ರ ಇದ್ದೆ ಇರುತ್ತದೆ. ಹೀಗಾಗಿ ಅದು ಚಲನಶೀಲತೆಯಿಂದ ಕೂಡಿದ್ದಾಗಿರುತ್ತದೆ. ಈ 'ಸಂತ'ತನ ಜೀವನಪ್ರೀತಿಯಿಂದ ಕೂಡಿದ್ದಾಗಿರುತ್ತದೆ.*

***Keywords:*** *ಕನ್ನಡ ಸಾಹಿತ್ಯ, ಅಕಥ ಕಥಾ, ಮನುಷ್ಯ ಚೇತನ, ಸಂತ, ಸತ್ಯ, ಪರಿಕಲ್ಪನೆ.*

## ಪೀಠಿಕೆ

'ಸಂತ'ತನ ಎನ್ನುವುದು ಸಾಮಾನ್ಯ ಪರಿಭಾಷೆಯಲ್ಲಿ 'ಒಳ್ಳೆಯತನ' ಎನ್ನುವ ಅರ್ಥದಲ್ಲಿ ಬಳಕೆಯಾಗುತ್ತದೆ. ಹಾಗಾದರೆ 'ಒಳ್ಳೆಯತನ' ಎನ್ನುವುದು ಯಾವುದು ಎನ್ನುವುದಾದರೆ ಅದು ವ್ಯಕ್ತಿಯಿಂದ ವ್ಯಕ್ತಿಗೆ, ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ 'ತನ್ನಿಂದ ಇನ್ನೊಬ್ಬರಿಗೆ ಹಾನಿ ಆಗದ ಹಾಗೆ ಬದುಕುವ ಕ್ರಮ' 'ಸಂತ'ತನವಾಗಿದೆ. ಮನುಷ್ಯ ಹೊಂದಿದ ಮೂಲಪ್ರವೃತ್ತಿಗಳಾದ ಹಿಂಸಾತ್ಮಕವಾದ, ವ್ಯಸನಯುಕ್ತವಾದದ್ದನ್ನು ತ್ಯಜಿಸಿ ಬದುಕುವುದಾಗಿದೆ. 'ಸಂತ'ತನವೆಂದರೆ ನಿರಂತರ ಬದಲಾವಣೆ ಆಗುವಿಕೆ. ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ ಪರಿಭಾಷೆಯಲ್ಲಿ

***Please cite this article as:*** ಅಕ್ಷಿತ, ಎಂ. ಎಂ. (2025). ಅಕಥ ಕಥಾ: ಮನುಷ್ಯ ಚೇತನವನ್ನು ಕಟ್ಟುವಿಕೆಯ ಪರಿಕಲ್ಪನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(3), 145–153

ಇದು ಭಿನ್ನವಾಗುತ್ತದೆ. ಆಯಾ ಧರ್ಮಗಳಿಗುಣವಾಗಿ ಭಿನ್ನತೆ ಪಡೆದಿದ್ದರು ಇದರ ಮೂಲ ಗುಣ ಒಳ್ಳೆಯತನ. ಇದು ಏಕಕಾಲದಲ್ಲಿ ಆಧ್ಯಾತ್ಮಿಕವು, ಧಾರ್ಮಿಕವು ಸಾಮಾಜಿಕವು ಆಗಿರುತ್ತದೆ. ಇದು ವೈಯಕ್ತಿಕ ನೆಲೆಯಿಂದ ಪ್ರಾರಂಭವಾಗಿ ಸಾಮಾಜಿಕ ಸ್ವರೂಪವನ್ನು ಪಡೆದುಕೊಂಡು ಸಮಾಜಕ್ಕೆ ವಿರುದ್ಧವಾಗಿರುವ ಕೆಡಕುಗಳೊಡನೆ ನಿರಂತರ ಹೋರಾಟ ಮಾಡುತ್ತದೆ. ಸಾಂಪ್ರದಾಯಿಕ ಮತಧರ್ಮಗಳ ಕುರಿತ ಭಕ್ತಿ ಮತ್ತು ಶ್ರದ್ಧೆಗಿಂತ ಭಿನ್ನವಾದ ಒಂದು ಸಾತ್ವಿಕ ಪರಿಕಲ್ಪನೆ ಇದಾಗಿದೆ. ಸಂತನಾಗುವ ಪ್ರಕ್ರಿಯೆಗೆ ತನ್ನನ್ನು ತಾನು ಒಡ್ಡಿಕೊಳ್ಳುವಲ್ಲಿ ಸಮಸ್ಯಾತ್ಮಕ ನೆಲೆಯ ಮೂಲ ಬೀಜವೊಂದಿರುತ್ತದೆ. ಪ್ರಾಪಂಚಿಕ ಜೀವನದ ಸಮಸ್ಯೆ ಮತ್ತು ಸವಾಲುಗಳು ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ.

ಅವುಗಳಿಗೆ ಉತ್ತರ ಹುಡುಕುವಲ್ಲಿ ಪ್ರಯತ್ನಗಳು ಇಲ್ಲಿಂದ ಪ್ರಾರಂಭವಾಗುತ್ತವೆ. 'ಸಂತ'ತನವನ್ನು ಆಗು ಮಾಡಿಕೊಂಡ ಸಂತರು ಮೂಲ ನೆಲೆಯಲ್ಲಿ ತೀವ್ರವಾದ ಸವಾಲನ್ನು ಎದುರಿಸುತ್ತಾರೆ. ಹೀಗಾಗಿ ಪರಿವರ್ತನೆಗೆ ಬಯಸುವ ಬಗೆಯೊಂದಾದರೆ, ಇನ್ನೊಂದು ಬಗೆ ಸ್ವಭಾತಃ ಹುಟ್ಟಿನಿಂದಲೇ 'ಸಂತ'ತವನ್ನು ಕೆಲವರು ಪಡೆದುಕೊಳ್ಳುತ್ತಾರೆ.

ಈ ಕಥಾ ಸಂಕಲನದ ಬಹುತೇಕ ಕಥೆಗಳ ಆರಂಭದಲ್ಲಿ ಒಂದು ಸಮಸ್ಯೆ ಹುಟ್ಟಿಕೊಳ್ಳುತ್ತದೆ. ಅದಕ್ಕೆ ಪರಿಹಾರಾರ್ಥವಾಗಿ ಸಂತನಾಗುವ ಪ್ರಕ್ರಿಯೆಗಳು ನಡೆಯುತ್ತವೆ. ಕೆಲವು ಕಥೆಗಳಲ್ಲಿ 'ಶೇಖರ ಮಾಸ್ತರ', 'ರುಕುಮವ್ವ' ಎನ್ನುವಂತಹವರು ಸ್ವಭಾವತಃ ಸಂತರಾಗಿದ್ದಾರೆ. ಮೊದಲನೆಯ ಕಥೆಯಾದ 'ಅ ಕಥ ಕಥಾ' ಕಥೆಯಲ್ಲಿ ಪ್ರಮೋದನಿಗೆ ಕೆಲಸ ಕಳೆದುಕೊಂಡಿದ್ದು ಮುಖ್ಯ ಸಮಸ್ಯೆಯಾಗಿದೆ. ಈ ಸಮಸ್ಯೆಯ ಪರಿಹಾರಾರ್ಥ ಅವನ ಪಯಣ ನಡೆಯುತ್ತದೆ. ಒಬ್ಬ ವ್ಯಕ್ತಿಯಲ್ಲಿ 'ಸಂತ'ತನ ಆವಿರ್ಭವಿಸಬೇಕಾದರೆ, ಜೀವನಾನುಭವ ಪ್ರಮುಖ ಕಾರಣವಾಗಿರುತ್ತದೆ. ಜೀವನದಲ್ಲಿ ನಡೆದ ಯಾವುದೋ ಒಂದು ಘಟನೆ ಅವನ ಒಳ ಮನಸ್ಸನ್ನು ಕಲಕಿದಾಗ ಅವನು 'ಸಂತ'ನಾಗುವ ಮಾರ್ಗವನ್ನು ಹಿಡಿಯುತ್ತಾನೆ. ಆ ಘಟನೆ ಸಮಸ್ಯೆ ಸ್ವರೂಪದ್ದೆ ಆಗಿರಬೇಕು ಅಥವಾ ದುರಂತಗಳ ಆಗಿರಬೇಕೆಂಬುದಿಲ್ಲ. ಅವನ ಹುಟ್ಟು ಸ್ವಭಾವದಲ್ಲಿ ಅದು ಬಂದು, ಅದು ಚಿಗುರಿ ಮಾಗಿಕೊಂಡು ಹೊರಬರಲು ಕೆಲ ಘಟನೆಗಳು ಕಾರಣವಾಗಬಹುದು. ಈ ಕಥೆಯಲ್ಲಿ ಪ್ರಮೋದನಿಗೆ ಒಂದು ಸಮಸ್ಯೆ ಇದೆ, ಆ ಸಮಸ್ಯೆಗೆ ಸಹಜವಾದ ಪರಿಹಾರಗಳಿವೆ. ಆ ಪರಿಹಾರವನ್ನು ಕಂಡುಕೊಳ್ಳುವ ಪಯಣದಲ್ಲಿ ಅವನು ಆ ಪರಿಹಾರಗಳಾಚೆಗೆ ಇನ್ನೊಂದು ಜಗತ್ತನ್ನು ಕಾಣುತ್ತಾನೆ. "ಅವಮಾನ, ತಿರಸ್ಕಾರ, ನಿಂದನೆಯಿಂದ ಹುಟ್ಟೋ ಹಿಂಸೆ ತಡೆದುಕೊಳ್ಳುದಕ್ಕಿಂತ ಎಲ್ಲದರಿಂದ ದೂರ ಇರೂದ ಛಲೋ! ಅದನ್ಯಾಕ ಎಲ್ಲಾದರಿಂದ ಓಡಿ ಹೋಗ್ತಿ ಅಂತ ನೀನು ಅರ್ಥ ಮಾಡಿಕೊಳ್ಳತಿ? ಲೋಕದ್ದು ಒಂದು ದಾರಿ ಆದ್ರ. ನಂದೇ ಒಂದು ದಾರಿ ಅಂತ್ಯಾಕ ತಿಳಕೋವಲ್ಲಿ? ನನಗೆ ಹೆಂಗ್ ಬೇಕು ಹಾಂಗ ಬದುಕಾಂವ"[1] ಈ ಮಾತುಗಳಲ್ಲಿ ಸಂತತ್ವದ ಬೀಜಗಳಿವೆ. ಅದು ರೂಪಗೊಳ್ಳುವುದೇ ವ್ಯಕ್ತಿ ತಾನು ಇತತರಗಿಂತ ತಿಳುವಳಿಕೆಯಲ್ಲಿ ಭಿನ್ನ ಎಂಬ ಆಲೋಚನೆಯಿಂದ. ಲೋಕದ ದಾರಿ ಒಂದು ಇದೆ ಅದನ್ನು ಮೀರಿದ್ದು ಇನ್ನೊಂದು ಲೋಕವಿದೆ ಎನ್ನುವ ಅರಿವು ಅಂತರಂಗಕ್ಕೆ ಇರುತ್ತದೆ. ಅದನ್ನು ವಿಸ್ತಾರಗೊಳಿಸಿದವನು ಇತರರ ದೃಷ್ಟಿಯಲ್ಲಿ ಸಂತನಾಗುತ್ತಾನೆ. "ಲೋಕದ ಎಲ್ಲ ಕೆಟ್ಟ ಅನುಭವಗಳು ಪ್ರಮೋದನಿಗೆ ಏಕೆ ಅಗತವೋ"?[2] ಎಂದುಕೊಳ್ಳುವ ನಂದಕೀಶೂರನ ಈ ಪ್ರಶ್ನೆ ತುಂಬಾ ಮುಖ್ಯವಾದದ್ದು.

ಆದರೆ ಅವನಲ್ಲಿ ವಿಚಿತ್ರವಾದ ಧೈರ್ಯವಿದೆ. ಆ ಧೈರ್ಯ ಈ ನೆಲದ ಸತ್ವದ್ದು ಎಂಬುದು ಅವನ ಮಾತುಗಳಿಂದ ಸ್ಪಷ್ಟವಾಗುತ್ತದೆ. 'ಅತಿಲೋಕ ಸುಂದರಿ' ಕಥೆಯಲ್ಲಿ 'ಸಂತ'ತನದ ಗುಣ ಕಾಣಿಸಿಕೊಳ್ಳಲು ಮುಖ್ಯ ಕಾರಣ ಹಿಂಸೆ.

ಮುತಾಮೇಸ್ತ್ರಿ ಮಾಡುವ ದೈಹಿಕ ಮತ್ತು ಲೈಂಗಿಕವಾದ ಹಿಂಸೆ ಮಂಗಮ್ಮನನ್ನು ಬದಲಾಗುವಂತೆ ಮಾಡುತ್ತದೆ. ಇಲ್ಲಿ ಆಕೆಗೆ ಪ್ರತಿರೋಧಿಸಲು ಅವಕಾಶವಿಲ್ಲ. ಆದರೆ ಅದಕ್ಕೆ ಸಿದ್ಧವಾಗುವ ಒಂದು ಪ್ರಕ್ರಿಯೆ ಆಂತರಿಕವಾಗಿ ನಡೆಯುತ್ತಿರುತ್ತದೆ. ಮಂಗಮ್ಮನ ಸಮಸ್ಯೆಗೆ ಮುತಾಮೇಸ್ತ್ರಿ ಮುಖ್ಯ ಕಾರಣವಲ್ಲ. ಅಂತಹವನ ಸೃಷ್ಟಿಗೆ ಕಾರಣವಾಗಿರುವ ಸಮಾಜವೆ ಆಗಿದೆ. ಅವನು ನೆಪ ಮಾತ್ರ ಎನ್ನುವುದು ಈ ಕಥೆ ಸಾರುತ್ತದೆ. ಮಂಗಮ್ಮನ ಒಟ್ಟು ವರ್ತನೆ ಸಮಾಜವನ್ನು ವಿಮರ್ಶೆಗೆ ಒಳಮಾಡುತ್ತದೆ.

'ವೈಶಾಖದ ದಿನಗಳು' ಕಥೆಯಲ್ಲಿ ಅಪ್ಪ ಮತ್ತು ಮಗನ ನಡುವಿನ ಭಿನ್ನಾಭಿಪ್ರಾಯಗಳು ಜಗಳವಾಗಿ ಅವರ ನಡುವೆ ಸಂವಾದ ಎನ್ನುವುದು ಕೇವಲ ವ್ಯವಹಾರಿಕವಾಗಿರುತ್ತದೆ. ಇದೊಂದು ಸವಾಲಾಗಿದೆ ಈ ಸಮಸ್ಯೆಗೆ ಮುಖ್ಯ ಪರಿಹಾರ ರೂಪವಾಗಿ ಅಪ್ಪ 'ಸಂತ'ತನದ ಗುಣ ಸಹಾಯಕವಾಗುತ್ತದೆ. ಅದನ್ನು ಅಪ್ಪ ಗಳಿಸಿಕೊಂಡಿದ್ದು ಅನುಭದಿಂದ. ಅಪ್ಪನ ಮಾತು ಮಗನ ಮನಸ್ಸನ್ನು ಬದಲಾಯಿಸುತ್ತದೆ. 'ಹೊಳೆ ಬದಿಯ ಬೆಳಗು' ಕಥೆಯಲ್ಲಿ ಸಹಜ ಸಿದ್ಧವಾದ 'ಸಂತ'ತನವಿದೆ. ತಿಂಥಿಣಿ ದೈವಿಕ ನೆಲದಲ್ಲಿ ಈ ಕಥೆಯ ಕ್ರಿಯೆ ಜರುಗುತ್ತದೆ. ಮೂರು ವ್ಯಕ್ತಿತ್ವದ, ಮೂರು ಭಿನ್ನ ಸಮಸ್ಯೆಗಳಿವೆ. ರುಕುಮ್ಮವ ಮತ್ತು ಮೊಮ್ಮಗನ ಸ್ವಾಭಿಮಾನದ ಪ್ರಶ್ನೆ, ಗಂಡನ ಹುಡುಕುವ ಚಂದ್ರವ್ವನ ಕ್ರಿಯೆ ಮತ್ತು ಬಾಬಣ್ಣ ಇಡಿ ಸಂಸಾರವನ್ನು ಬೇರೆ ಬೇರೆ ಕಾರಣಕ್ಕೆ ಕಳೆದುಕೊಂಡಿದ್ದು. ಇಲ್ಲಿಯ ಕಥಾ ಬೆಳವಣಿಗೆ.

'ನೀಲಿ ಆಕಾಶದ ಕಣ್ಣು' ಕಥೆ ಹೂವ್ವಿಯ ಸಮಸ್ಯೆ ಗಂಡನನ್ನು ಸೇರುವುದು ಅಥವಾ ಸ್ವಾತಂತ್ರ್ಯವಾಗಿ ಜೀವಿಸುವುದು ಎನ್ನುವುದಾಗಿದೆ. ಅನಾಥಳಾದ ಅವಳಿಗೆ ಅನಾಥಪ್ರಜ್ಞೆ ಕಾಡದ ಹಾಗೆ ಮಾಡಿರುವುದು 'ಸಂತ'ತನವನ್ನು ಮೈಗೂಡಿಸಿ ಕೊಂಡಿರುವ ಶೇಖರ ಮಾಸ್ತರ. ಪ್ರೊಫೆಸರ್ ಕದಂ ಅವರಿಗೆ ಹೆಂಡತಿ ಮಗಳು ದೂರಾಗಿದ್ದಾರೆ. ನೀಲಾಂಜನೆಗೆ ತಾಯಿ ದೂರವಾಗಿದ್ದಾಳೆ. ತನ್ನ ತಂದೆಯ ಹಾಗೆ ಏನನ್ನೂ ಬಯಸದ ಹುಡುಗನನ್ನು ಮದುವೆಯಾಗಲು ಪ್ರಯತ್ನಿಸುತ್ತಾಳೆ. 'ಕನ್ಯಾಗತ' ಕಥೆಯಲ್ಲಿ ಸಂಪತ್ತಿನ ನಿರಾಕರಣೆಯಿದೆ. ವಾಸುದೇವನಿಗೆ ವಿವಿಧ ಸಂತರ ಪ್ರಭಾವಿದೆ. ಹುಟ್ಟಿನಿಂದಲೇ ಕುಟುಂಬ ಸದಸ್ಯರಿಂದ ತಿರಸ್ಕೃತನಾಗಿದ್ದ ಇವನು ಕಳ್ಳತನದ ಆರೋಪದ ಒಳಗಾಗಿ ಮನೆಯನ್ನು ಬಿಡುತ್ತಾನೆ. ಅಲೆಮಾರಿ ಬದುಕಿನ ಆರಂಭದ ದಿನಗಳಲ್ಲಿ ದಿನವೂ ಮನೆಯ ನೆನಪುಗಳು ಮೈಮೇಲಿನ ಕೂದಲನ್ನು ಕಿತ್ತಿ ಕಿತ್ತಿ ಹಿಂಸಿಸುವಂತೆ ಕಾಡುತ್ತಿದ್ದವು. ಅವು ಕಣ್ಮುಚ್ಚಿ ತೆಗೆದರೆ ಅವ್ವನ ಚಿತ್ರ ಕಂಡಂತಾಗಿ ಅಳುತ್ತ ಕೂರುತ್ತಿದ್ದ. ಆದರೆ, ಆ ಬದುಕು ತನಗಿಲ್ಲ ತನ್ನದೇ ಬದುಕೆಂಬುದು ತನ್ನಗಿಲ್ಲ. ತಾನೇನಿದ್ದರೂ ಪರರ ದುಸ್ವಪ್ನದ ಪಾತ್ರವೆನ್ನುವಂತೆ ಬದುಕುವವನು ಎಂದೆನಿಸಿ ಸುಮ್ಮನಾಗುತ್ತಿದ್ದ ಈ ಸಮಸ್ಯೆಯನ್ನು ಸಂತರ ಸಹವಾಸದಿಂದಲೇ ಬಗೆಹರಸಿಕೊಳ್ಳುತ್ತಾನೆ. ಈ ತರಹದ ಸಮಸ್ಯೆಗಳು ಮನುಷ್ಯ ತನ್ನನ್ನು ತಾನು ತೀವ್ರವಾಗಿ ವಿಮರ್ಶಿಕೊಳ್ಳಲು ಪ್ರೇರೇಪಿಸುತ್ತವೆ. ಸದ್ಯ ಇರುವ ನೆಲೆಯಿಂದ ಮೇಲಿನ ಸ್ತರಕ್ಕೆ ಸಾಗಲು ಇವು ಕಾರಣವಾಗುತ್ತವೆ

ಈ ಎಲ್ಲ ಅಂಶಗಳು ಕಥೆಯ ಆರಂಭದ ಬಿಂದುಗಳಾಗಿವೆ. ಆರಂಭದಲ್ಲಿ ಒಂದು ಸವಾಲು ಅಥವಾ ಸಮಸ್ಯೆಯನ್ನು ಹುಟ್ಟು ಹಾಕಿ ಅದರ ಪರಿಹಾರ್ಥ ಭಿನ್ನ ಶೋಧಗಳು ಈ ಕಥೆಗಳಲ್ಲಿ ನಡೆಯುತ್ತವೆ. ಸಮಸ್ಯೆಗಳೆ ಕೇಂದ್ರವಾಗಿರುವುದರಿಂದ ಈ ನೆಲೆಯು ಆರಂಭದ ನೆಲೆ ಸಹ ಆಗಿದೆ. ಇದರಿಂದ ಉಂಟಾಗುವ ನೋವು ಆಳವಾಗಿ ಯೋಚಿಸುವಂತೆ ಮಾಡುತ್ತದೆ. ಇಂತಹ ಹಂತದಲ್ಲಿಯೇ ವ್ಯಕ್ತಿಗಳಿಗೆ ಹೊಸ ತಿಳಿವಳಿಕೆಗಳು ಮೊಳಕೆಯೊಡೆಯಲು ಪ್ರಾರಂಭಿಸುತ್ತವೆ. ಭಯದ ಮೂಲವನ್ನು ಸರಿಯಾಗಿ ಗುರುತಿಸುವ ಪ್ರಯತ್ನಗಳು ಈ ಹಂತದಲ್ಲಿ ನಡೆಯುತ್ತವೆ. ಹಿಂದೆ ಗುರುತಿಸಿದ ಸವಾಲು ಮತ್ತು ಸಮಸ್ಯೆಗಳಿಗೆ ಪರಿಹಾರ ರೂಪವಾದ

ಪ್ರಕ್ರಿಯೆಗಳು ಮುಂದಿನ ಹಂತದಲ್ಲಿ ಜರಗುತ್ತವೆ. ಆರಂಭದಲ್ಲಿನ ಸಮಸ್ಯೆಗಳಿಗೆ ವ್ಯವಸ್ಥೆಯ ಕ್ರೂರತ್ವ ಕಾರಣವಾಗಿರುತ್ತದೆ. ಅದು ಮೂರ್ತ ಹಾಗೂ ಅಮೂರ್ತದ್ದಾಗಿರುತ್ತದೆ. ಮುಂದೆ ನಡೆಯುವ ಘಟನೆಗಳು ಎದುರಿಸಲು ಸಹಕರಿಸುತ್ತವೆ. ಈ ಹಂತದಲ್ಲಿ ಮುಖ್ಯವಾಗಿ ಚಲನೇ ಇರುತ್ತದೆ. ಒಂದು ಭೌತಿಕ ಚಲನೆಯಾಗಿದ್ದರೆ, ಇನ್ನೊಂದು ಬೌದ್ಧಿಕ ಚಲನೆ ಆಗಿರುತ್ತದೆ. ಭೌತಿಕ ಚಲನೆ ಒಂದು ಊರಿನಿಂದ ಇನ್ನೊಂದು ಊರಿಗೆ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ನಡೆಯುತ್ತಿರುತ್ತದೆ. ಇಂತಹ ಮಹಾಪಯಣವು ಬೌದ್ಧಿಕ ಚಲನೆಯನ್ನು ಉತ್ಕೃಷ್ಟತೆಗೆ ಕೊಂಡಯ್ಯುವುದರ ಮೂಲಕ ಮನಸ್ಸನ್ನು ವಿಸ್ತಾರಗೊಳಿಸುತ್ತಿರುತ್ತದೆ.

ಈ ಸಂಕಲನದ ಪ್ರತಿಯೊಂದು ಕಥೆಗಳಲ್ಲಿಯೂ ಭಿನ್ನ ಚಲನೆಗಳಿವೆ. 'ಆಕಥಾ ಕಥ' ಕಥೆಯಲ್ಲಿ ಪ್ರಮೋದ ಸೆಲೋಮಿ ಎಂಬ ವಿದೇಶ ಹೆಣ್ಣುಮಗಳು ಕೈಗೊಂಡ ಅಧ್ಯಯನಕ್ಕಾಗಿ ಅವರಿಗೆ ಗೈಡ್ ಆಗಿ ಇರಲು ಅವರೊಂದಿಗೆ ಪಯಣ ಬೆಳೆಸುತ್ತಾನೆ. ಕರ್ನಾಟಕದ ಬಹತೇಕ ಭಾಗಗಳು ಹಾಗೂ ಉತ್ತರ ಭಾರತದ ಸಂತರು ವಾಸಿಸುತ್ತಿರುವ ಹಲವು ಪ್ರದೇಶಗಳನ್ನು ಇವನು ಸುತ್ತುವುದರಿಂದಲೇ ಅವನ ಮನಸ್ಸು ಪರಿವರ್ತನೆಯಾಗುತ್ತದೆ. ಸಲೋಮಿಯ ವಿಚಾರಶಕ್ತಿ, ಬೌದ್ಧಿಕ ಪ್ರಾಮಾಣಿಕತೆ, ಭೌತಿಕಲೋಕದ ವಸ್ತುವಿಷಯಗಳ ಅದಮ್ಯ ನಿರ್ಲಕ್ಷ್ಯ ಕೂಡ ಪ್ರಮೋದನನ್ನು ಸೆಳೆಯುತ್ತವೆ. ಇದು ತನ್ನ ಮುಂದಿನ ಹಂತಕ್ಕೆ ಕೊಂಡುಯ್ಯುವ ಬಿಂದುವಾಗಿರುತ್ತದೆ. ಈ ಎಲ್ಲ ಅಂಶಗಳು ಪ್ರಮೋದಲ್ಲಿ ಇದ್ದರೂ ಸಹ ಅವು ಆಚರಣೆಗೆ ಬರಲು ಸರಿಯಾದ ಪರಿಸರ, ವೇದಿಕೆಗಳು ಅವನಿಗಿಲ್ಲ. ಸಲೋಮಿಯಿಂದ ತನ್ನಲ್ಲಿ ಉಂಟಾದ ತಳಮಳಕ್ಕೆ ಉತ್ತರ ಕಂಡುಕೊಳ್ಳಲು ಅವನು ಹೀಗೆ ಕೇಳುತ್ತಾನೆ. "ಈತನೂ ಮುಕ್ತವಾಗಿಯೇ, ಖಂಡಿತವಾಗಿಯೂ ಇರಲ್ಲ. ಆದರೆ, ತಿಕ್ಕಾಟವನ್ನು ಹುಟ್ಟು ಹಾಕುವ ನೈತಿಕ ಮುಖವಾಡವನ್ನು ಹೊದ್ದ, ಕಾಮದ ಗೊಂಡರಾಣ್ಯದ ಭಯಾನಕ ಪ್ರಯಾಣವೊಂದು ಇರ್ತಲ್ಲ ಅದನ್ನು ಹೆಂಗ ನಿಭಾಯಿಸುವುದು?" [3] ಎನ್ನುವ ಪ್ರಶ್ನೆಗೆ ಸಲೋಮಿ "ಪ್ರತಿಯೊಂದಕ್ಕೂ ನಿಸರ್ಗ ಸಹಜವಾದ, 'ಅದರವ್ವೈಸ್' ಅನ್ನುವಂಥ ಶಮನ ಇದ್ದೇ ಇರುತ್ತೆ ಮೈ ಡಿಯರ್ ಫ್ರೆಂಡ್. ಹೇಗೆ ದ್ರವಿಸಬೇಕು ಹೇಗೆ ಶುಚಿಯಾಗಬೇಕು ಅನ್ನೋದನ್ನ ಹಸಿಹಸಿಯಾಗಿ ವಿಧಿಸಿಕೊಳ್ಳುವ ನಾವೇ ಕಂಡುಕೊಳ್ಳಬೇಕು. ದಂಡನೆಯಿಂದ ಅಂಥ ಅರಿವು ಕಂಡುಕೊಳ್ಳಬಹುದೇನೊ"[4] ಎನ್ನುತ್ತಾಳೆ. ಇದು ಸಂತನಾಗಿ ಬಾಳುವ ವ್ಯಕ್ತಿಗೆ ಬಹು ಮುಖ್ಯವಾದದ್ದು. ವಾಸನಾರಹಿತ ಬದುಕನ್ನು ಸಾಗಿಸಲು ಹಲವು ಉಪಾಯಗಳು ಇರುತ್ತವೆ. ಅದರಲ್ಲಿ ಕಾಮ ನಿಯಂತ್ರಣ ಎನ್ನುವುದು. ಬಹುಮುಖ್ಯವಾಗುತ್ತದೆ. ಹೀಗಾಗಿ ಈ ತಿಕ್ಕಾಟವನ್ನು ಮೀರಲು ಅವನು ಪ್ರಯತ್ನಿಸುವುದೇ ಇಲ್ಲಿ ಮೂಲವಾಗಿದೆ.

"ಒಂದೂರಿನಿಂದ ಇನ್ನೊಂದೂರಿಗೆ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ, ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ, ಕೊನೆಗೆ, ಒಂದು ಅನುಭವದಿಂದ ಇನ್ನೊಂದು ಅನುಭವಕ್ಕೆ ತೆರೆದುಕೊಳ್ಳತ್ತ ಹೋಗುವಾಗ ತನ್ನೊಳಗೆ ಗುರುತಿಸಲಾಗದ ಬದಲಾವಣೆಯೊಂದು ನಡೆಯುತ್ತದೆ ಎಂದು ಪ್ರಮೋದನಿಗೆ ಅನಿಸ ತೊಡಗಿತು"[5] ತಾನು ನಿಂತ ನೆಲದಲ್ಲಿ ದೊರಕಲಾರದ ಕೆಲವು ಮಹತ್ವದ ಅಂಶಗಳು ಬೇರೆ ಪ್ರದೇಶಕ್ಕೆ ಹೋದಾಗ ದಕ್ಕುತ್ತವೆ. ಭೌತಿಕ ಚಲನೆ ಇಲ್ಲದೆ ನಾವು ವಾಸಿಸುವ ಪ್ರದೇಶದಲ್ಲಿಯೇ ಭಿನ್ನ ಅನುಭಗಳಿಂದ 'ಸಂತ'ತನ ಸಾಧಿಸಬಹುದು ಆದರೆ ಇದು ಸಂಪೂರ್ಣ ಸತ್ತವಲ್ಲ ಭೌತಿಕ ಚಲನೆಯಿಂದ ದೇಹ ಕಳೆದುಕೊಂಡಿರುವ ಕೆಲವು ಸ್ಮೃತಿಗಳು ಪುನ: ಉದ್ಭವಿಸುತ್ತವೆ. ಚಲನೆ ಮಾಡಿದರೆ ಅದರ ಬಿಂದು ತೆರದುಕೊಳ್ಳುತ್ತವೆ. ಆಗ ಮನಸ್ಸಿಗೆ ವಿಶಾಲತೆಯ ಅರಿವು ಬರುತ್ತದೆ. ಬೇರೆ ಬೇರೆ ಪಂಥಗಳ ಬಾಬಾಗಳು ಸಾಧುಗಳು, ಸಿದ್ದರು, ನಾಥರು,

ಫಕೀರರು, ಅವಧೂತರು, ಆರೊಢರು ಹೀಗೆ ಹೆಸರು ಏನೇ ಆದರೂ ಎಲ್ಲರೂ ನಿರ್ಗುಣವೂ, ನಿರಾಕಾರವೂ ಆದುದೇನನ್ನೋ ಹುಡುಕುತ್ತಿದ್ದರು. ಈ ಹುಡಕಾಟದಲ್ಲಿ ನಿರ್ಭಯತೆಯೇ ಮೊದಲ ಗುಣವಾಗಿತ್ತು. ಇಂತಹುಗಳನ್ನು ಕಾಣುವ ಪ್ರಮೋದನಿಗೆ ಆಂತರಿಕ ಬದಲಾವಣೆ ಸಾಧ್ಯವಾಗುತ್ತದೆ. ಇವರುಗಳಂತೆ ತಾನೂ ಆಗಬೇಕೆಂಬ ಯಾವ ಪೂರ್ವಲೋಚನೆ ಅವನಲ್ಲಿ ಇರದಿದ್ದರೂ ಅಪ್ರಜ್ಞಾ ಪೂರ್ವಕವಾಗಿ ಇದು ಅವನನ್ನು ಆವರಿಸಿಕೊಳ್ಳುತ್ತದೆ. ತನ್ನ ಸಮಸ್ಯೆಗಳಿಗೆ ಪ್ರತಿಕ್ರಿಯಾಗಿ ಇವು ಸಂಭವಿಸುತ್ತವೆ. ಈ ಅನುಭವದ ಜೊತೆಗೆ ತಾನು ಹಿಂದೆ ಓದಿದ ಭಕ್ತಿಪಂಥದ ತಿಳಿವಳಿಕೆಗಳು ಸಹ ಅವನು ಈ ದಾರಿ ಹಿಡಿಯಲು ಕಾರಣ ವಾಗುತ್ತವೆ. "ಸಾಮಾನ್ಯರ ನೋಟಕ್ಕೆ ಹಲವೊಮ್ಮೆ ವಿಚಿತ್ರವಾಗಿ, ಭಿಕ್ಷುಕರಾಗಿ, ನಿರ್ಗತಿಕರಾಗಿ, ನಿರುಪದ್ರವಿಗಳಾಗಿ ಕಾಣುವ ಈ ಸಾಧಕರ ಲೋಕದೊಳಗೆ ಹೊಕ್ಕಲ್ಲದೆ ಯಾವುದೂ ತೆರದುಕೊಳ್ಳುತ್ತಿರಲಿಲ್ಲ. ಒಳಗಿಳಿದರೆ, ಮೃದತ್ವ, ಸಹವಾಸ, ಸಂತಸ, ಸಹನೆ, ಕೈಹಿಡಿದು ನಡೆಸುವ ಉದಾರತೆ, ಸಾತ್ವಿಕತೆಗಳಿಂದ ತುಂಬಿದ, ಬಿಡುಗಡೆ ತಹತಹಿಸುವ ಪಯಣದ ಅನುಭವಾಗುತಿತ್ತು"[6] ಇಂತಹ ಕಾರಣಕ್ಕಾಗಿಯೇ ಅವನು ಖಾಲಿಯಾಗುತ್ತ, ತುಂಬಿಕೊಳ್ಳುತ್ತ ಸಾಗುತ್ತಾನೆ.

ಅಪ್ರಜ್ಞಾಪೂರ್ವಕವಾಗಿ ಅವನ ಮನಸ್ಸು ಗುರುವನ್ನು ಬಯಸುತಿರುತ್ತದೆ. ಸಂಗದಲ್ಲಿ ಅಂಗವನ್ನು ಮೀರುವ ಪ್ರಯತ್ನ ನಡೆಯುವ ಮುಖ್ಯ ನೆಲೆ ಇದಾಗಿದೆ. "ಚಂದ್ರವ್ವ ನಿಂತಲ್ಲಿಯೇ ತನ್ನ ಪಾದಗಳನ್ನು ಇನ್ನಷ್ಟು ಒತ್ತಿದಳು. ಅವು ನೆಲದಾಳಕ್ಕೆ ಬೇರು ಬಿಟ್ಟ ಬಳ್ಳಿಯಂತೆ ಬಳುಕಿದವು. ಕಲ್ಲುಬಂಡೆಯ ನಡುವೆ ಚಿಗುರುವ ವಿಸ್ಮಯದ ಹೂವಿನ ಕುಡಿಯಂತೆ ಬೆಳೆಯುತ್ತಿದ್ದೇನೆ, ಎನ್ನುವ ಭಾವ ಮೈತುಂಬಿ ಅವಳನ್ನು ಬೆಚ್ಚಗಾಗಿಸಿತು. ಆಕೆ ಗೋಣನ್ನು ಇನ್ನಷ್ಟು ಎತ್ತರಿಸಿದಳು. ಆ ಕ್ಷಣದಲ್ಲಿ ಅವಳು ಅನುಭವಿಸುತ್ತಿದ್ದ ಸುಖಕ್ಕೆ ಕೊರಳು ಟಿಸಿಲೊಡೆದು ಆಕಾಶಕ್ಕೆ ಹಬ್ಬುತ್ತ ಹೋಯಿತು"[7] ಎನ್ನುವುದು ಚಂದ್ರವ್ವನ ಅಂತರಂಗದ ವಿಸ್ತರಣೆಯನ್ನು ಸೂಚಿಸುತ್ತದೆ. ಬಾಬಣ್ಣ ಮತ್ತು ರುಕ್ಕಮವ್ವ ಎಂಬ ದ್ವಯ ಗುರುಗಳು ಹಾಗೂ ಮೋನಪ್ಪನ ಮೇಲೆ ಇಟ್ಟ ಅಪಾರ ನಂಬಿಕೆ ಇವಳನ್ನು ಎತ್ತರದ ಸ್ತರಕ್ಕೆ ಒಯ್ಯುತ್ತವೆ. ಸ್ತರಗಳು ಬದಲಾಗವುದು ಎಂದರೆ ಜೀವನವನ್ನು ನೋಡುವ ದೃಷ್ಟಿಕೋನ ಬದಲಾಗುವುದು. ಚಂದ್ರವ್ವನ ಸಹಜ ಜೀವನ ನಡೆಸುವ ಒಬ್ಬ ಮಹಿಳೆಯಾಗಿದ್ದು, ಅವಳಲ್ಲಿ ಹೊಸ ಪರಿಯ ಚಿಂತನೆ ಬೆಳೆಯುವ ಹಾಗೆ ಮಾಡಿದ್ದು ರುಕ್ಕಮ್ಮವ್ವ ಇವಳು ತನ್ನ ಜೀವನದಲ್ಲಿ ಕಂಡುಂಡ ಸತ್ಯಗಳನ್ನು ಅನುಭಾವಿಕ ನೆಲೆಯಡೆಗೆ ಪರಿವರ್ತಿಸುವ ಪ್ರಯತ್ನದಲ್ಲಿದ್ದಾಳೆ. ಅದು ಪ್ರಜ್ಞಾಪೂರ್ವಕವಾದ ಕ್ರಿಯೆಯಾಗಿಲ್ಲ, ಒಳ್ಳೆತನವನ್ನು ಕಂಡುಕೊಳ್ಳುವ ದೃಷ್ಟಿಕೋನವಾಗಿದೆ. ಇದಕ್ಕೆ ಅತ್ಯಂತ ಸೂಕ್ತ ಮಾರ್ಗದರ್ಶಕನಾದವನು ಬಾಬಣ್ಣ. ಚಂದ್ರವವ್ವ, ರುಕುಮವ್ವದು ಸಹಜ 'ಸಂತ'ತನವಾದರೆ, ಬಾಬಣ್ಣನದು ಆಧ್ಯಾತ್ಮಿಕ ನೆಲೆಯಿಂದ ಕೂಡಿದ್ದಾಗಿದೆ.

'ನೀಲಿ ಆಕಾಶದ ಹಣ್ಣು' ಕಥೆಯಲ್ಲಿ ಹೂವ್ವಕ್ಕ ಶೇಖರ ಮಾಸ್ತರ 'ಸಂತ'ತನ ಗುಣದಿಂದ ಪರಿವರ್ತನೆ ಹೊಂದುತ್ತಾಳೆ. "ಹೂವಿಯ ಬದುಕನ್ನು ಹೊಸದಾಗಿ ಬರೆಯುವ ಬಳಪದಂತೆ ಶೇಖರ ಮಾಸ್ತರರು ಆಕೆಯ ಜೀವನವನ್ನು ಪ್ರವೇಶಿಸಿದರು ಹಿಂಸಿಸುವ ಅತ್ತೆ ಮತ್ತು ಬಿಟ್ಟು ಹೋದ ಗಂಡನನ್ನು ಕ್ಷಮಿಸಿ ಹೊಸ ಬದುಕನ್ನು ಆರಂಭಿಸುತ್ತಾಳೆ. 'ಸಂತ'ತನದ ಎರಡು ಪ್ರಮುಖ ಗುಣಗಳಾದ ನಿರ್ಭಿತಿ ಹಾಗೂ ಸ್ವಾತಂತ್ರ್ಯ ಇವಳಲ್ಲಿ ಆವಿರ್ಭವಿಸುತ್ತವೆ. ನಮ್ಮ ಕಂಬಳಿ ನಾವ ಹೊರಬೇಕು ಎನ್ನುವ ಅಪ್ಪನ ಸಿದ್ಧಾಂತವನ್ನು ಅನುಷ್ಠಾನಕ್ಕೆ ತರುತ್ತಾಳೆ. ಕಂಬಳಿ ಬಹುದೊಡ್ಡ ರೂಪಕವಾಗಿ ಇಲ್ಲಿ ಬಂದಿದೆ. "ಇಲ್ಲದ ಸಂಸಾರ ಸುಖಕ್ಕ ದುಃಖ ಪಡದುಕ್ಕಿಂತ, ಇರೋ ದುಃಖ ನೀಗಿಸಿ ಸುಖಾ ಹೆಂಗ ಪಡೆಯೂದು ಅಂತ ವಿಚಾರ ಮಾಡು" [8] ಎಂಬ ಮಾತು ಅವಳ ಮೇಲೆ ಅಪಾರ ಪ್ರಭಾವ ಬೀರುತ್ತದೆ.

ಹೀಗಾಗಿ ಅವಳು ನಿರ್ಭಿಡೆಯಿಂದ ಹೊಸ ಜೀವನವನ್ನು ಕಟ್ಟಿಕೊಳ್ಳುತ್ತಾಳೆ. ಹೂವಿಯ ಜೀವನ ಶ್ರದ್ಧೆ ಗೆಲ್ಲಬೇಕೆಂಬ ಹಟದಿಂದ ಕೂಡಿದಾಗಿಲ್ಲ, ಆದರೆ ತನಗೆ ಸ್ವಾತಂತ್ರ್ಯ, ಸ್ವಾಭಿಮಾನ ತಂದು ಕೊಡದ ಸ್ಥಳದಲ್ಲಿ ಇರಬಾರದೆಂಬ ಪ್ರಜ್ಞೆಯಿಂದ ಕೂಡಿದಾಗಿದೆ.

'ಬಾರೋ ಗೀಜುಗ' ಕಥೆಯಲ್ಲಿ ಈ ನೆಲೆ ಸಾಧ್ಯವಾಗುವುದು ಬೌದ್ಧಿಕ ಸಂವಾದದ ಮೂಲಕ. ಪ್ರೊಫೆಸರ್ ಕದಂ ಹಾಗೂ ನೀಲಾಂಜನೆಯರ ನಡುವೆ 'ಹೊಳೆ ಬದಿಯ ಬೆಳಗು' ಕಥೆಯಲ್ಲಿ ರುಕುಮ್ಮವ, ಚಂದ್ರವ್ವ, ಬಾಬಣ್ಣನಿಗೆ ಕ್ರಮಬದ್ದವಾಗಿ ಅದುಮಿ ಕುಡಿಯುವಾಗ ನುಡಿಗಳಿಗೆ ಸಿಕ್ಕದ ಸಂತೋಷದಲ್ಲಿ ಮಂಗಮ್ಮ ಮುಳಗಿ ಹೋಗಿದ್ದಳು. ಎದೆಯ ಹಾಲಿನಂತೆಯೇ ಆಕೆಯ ಕಣ್ಣುಗಳಿಂದ ನೀರು ಪ್ರವಹಿಸತೊಡಗಿತು. ಮಗುವಿನ ಏದುಸಿರು ಹೆಚ್ಚುತ್ತ ಹೋದಂತೆ ಮೊಲೆಯ ಹಾಲು ಕೂಡ ಬತ್ತದ ಗಂಗೆಯಂತೆ ಹರಿಯುತ್ತಲೆ ಹೋಯಿತು. ಮೈಯೆಲ್ಲ ಅದೃಶ್ಯಲೋಕದ ಸೆಳತಕ್ಕೆ ಸಿಕ್ಕಿದೆ ಎಂಬಂತೆ ಅಲವೇಲು ಮಂಗಮ್ಮ ಪರವಶವಾದಳು ಈ ಪರವಶತೆ ಅವಳನ್ನು ಪರಮಾನಂದೆಡೆಗೆ ಒಯ್ಯುತ್ತದೆ. ಮುಖ್ಯವಾಗಿ ಕೆಡಕೊಂದರಿಂದ ಬಿಡುಗಡೆ ಪಡೆಯುವ ಪ್ರಕ್ರಿಯೆ ಇಲ್ಲಿದೆ. ಮಗು ಗುರುವಾಗುವ ಮೂಲಕ ಅವಳಿಗೆ ಅದೃಶ್ಯಲೋಕದ ಅನುಭವವಾಗುತ್ತದೆ.

'ವೈಶಾಖದ ದಿನಗಳು' ಕಥೆಯಲ್ಲಿ ದಿಕ್ಷಿತರು ತಮ್ಮ ಸಹಜ ಜೀವನ ಕ್ರಮ ಹಾಗೂ ಅನುಭಗಳಿಂದ 'ಸಂತ'ತನ ಸಾಧಿಸಿದ್ದಾರೆ. ಅದು ಅವರ ಒಟ್ಟು ವರ್ತನೆಯ ರೂಪವಾಗಿ ಹೊರಹೊಮ್ಮಿದೆ ತನ್ನ ಸಣ್ಣ ಮಾಣಿಗೆ ಮಾಡುವ ಸೇವೆ ತಂದೆಯ ಸಹಜ ಕರ್ತವ್ಯ ಎನಿಸಿದರು ಸಹ ಅದನ್ನು ನಿರ್ವಹಿಸಲು ಅಂತಃಕರಣ ಬಹುಮುಖ್ಯವಾಗುತ್ತದೆ. ಅವರ ಮಗ ವಿನಾಯಕನ ಲೋಕವ್ಯಾಪರ ಸಹಜವಾಗಿದೆ. ಇಂತಹ ಸಂದರ್ಭದಲ್ಲಿ "ಈ ತೋಟಪಾಟ ಎಲ್ಲ ಎನ್ ಸ್ವಾರ್ಥಕ್ಕಲ್ಲೋ ಮಾಣೀ ಉದ್ಯೋಗಂ ಪುರುಷ ಲಕ್ಷಣಂ. ಮುಂದಿನದ್ದು ಮುಂದಿನವಿಗೆ ಬಿಟ್ಟಿದ್ದು. ಎಂಗ್ ಅನ್ನಿತ್ತ ಅದನ್ ಮಾಡುವು ನಾನು" [9] ಎಂದು ಅತಿ ಮೃದುವಾದ ದನಿಯಲ್ಲಿ ಹೇಳಿದರು. ಅಪ್ಪನಿಂದ ನಿರೀಕ್ಷಿಸಿರದ ಅಂಥ ಮಾತು ಮತ್ತು ಮೃದತ್ವಗಳಿಗೆ ವಿನಾಯಕನಿಗೆ ಜೋಲಿ ತಪ್ಪಿ ಬೀಳುವಂತೆಯೇ ಆಯಿತು. ಆ ಕ್ಷಣಕ್ಕೆ ಅಪ್ಪನ ಕುರಿತ ಆತನ ದ್ವೇಷಾಸೂಯೆಗಳಲ್ಲ ಬೆವರಿ ನೆಲದಾಳ ಇಳಿಯತೊಡಗಿದಂತೆನಿಸಿತು ಈ ಮಾತುಗಳು ವಿನಾಯಕನಲ್ಲಿ ಅಪಾರ ಪರಿವರ್ತನೆಯನ್ನು ಸೂಚಿಸುತ್ತದೆ. ತಂದೆಯು ಆಸ್ತಿಯ ಮೇಲೆ ಹೊಂದಿದ ನಿರ್ಮೋಹತೆ ಅವನನ್ನು ಆಶ್ಚರ್ಯಕ್ಕೆ ಇಡು ಮಾಡುತ್ತದೆ. ಹಾಗೆ ಹೇಳಲು ಅವರಲ್ಲಿ ರೂಪಗೊಂಡಿದ 'ಸಂತ'ತನ ಕಾರಣವಾಗಿರುತ್ತದೆ. ಇದು ಸಂಪೂರ್ಣವಾಗಿ ಅನುಭಾವಿಕ ನೆಲೆಯಲ್ಲಿ ಘಟಿಸುವಂತದಲ್ಲ. ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿಯೂ ಸಹ ಬಹುಮುಖ್ಯವಾಗುತ್ತದೆ. ಇಂತಹ ಹಲವು ಕಾರಣಕ್ಕೆ ಕೆಲವರು ತಮ್ಮ ಅಜ್ಜ, ಅಪ್ಪ, ಅಜ್ಜಿ, ಅಮ್ಮ ತೀರಿಹೋದನಂತರ ಅವರ ಸ್ಮರಣೆ ಮಾಡುವಾಗ ಅಪ್ಪ ಸಂತನಂತೆ ಬಾಳಿ ಹೋದ, ಅಜ್ಜಿ ಸಂತಳಾಗಿದ್ದಳು ಎನ್ನುವಂತಹ ಮಾತು ಪ್ರಚಲಿತದಲ್ಲಿವೆ. ಅವು ಕೇವಲ ಆರೋಪಿತ ಗುಣಗಳಾಗಿರುವದಿಲ್ಲ, ಅವರು ಜೀವನವನ್ನು ನಿರ್ವಹಿಸದ ರೀತಿಯನ್ನು ಪ್ರತಿನಿಧಿಸುತ್ತವೆ. ದೀಕ್ಷಿತರ ಬಾಳಿನ ಕ್ರಮವು ಅದಾಗಿದೆ. ನಿಸರ್ಗ ಸಹಜ ಚಲನೆಯ ಬದುಕನ್ನು ರೂಪಿಸಿಕೊಂಡ ಎಲ್ಲ ವ್ಯಕ್ತಿತ್ವಗಳು 'ಸಂತ'ತನದ ಪ್ರತಿನಿಧಿಯಾಗಿ ತಿಂಥಣಿಯ ಕೃಷ್ಣೆಯ ತಡದಲ್ಲಿ ಈ ನೆಲೆಯನ್ನು ಮುಟ್ಟುತ್ತಾರೆ. ಬಾಬಣ್ಣ ಸಂತನಾಗುವುದು ಎಂದರೆ ಇದು 'ಸಂತ'ತನ ವ್ಯಾಖ್ಯಾನವಾಗಿದೆ ಮತ್ತು ಅದರ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಡುತ್ತದೆ. ಆದರೆ ಇದು ಸಂಸಾರದಿಂದ ನಿರ್ಲಿಪ್ತತನ ಹೊಂದುವ ಸ್ಥಿತಿಯಲ್ಲ, ಅದರಲ್ಲಿಯೇ ಇದ್ದುಕೊಂಡು ಸಹಜವಾಗಿ ಸಮಾಜ ಎದುರಿಸಲಾರದ, ಅದು ಕಾಣಲಾಗದನ್ನು ಇವರು ಕಂಡು ಮಾರ್ಗದರ್ಶನ ಮಾಡುವು ದಾಗಿದೆ. ಇದನ್ನು ಸಾಧಿಸುವ ಕುರಿತು ಬಾಬಣ್ಣ "ಎಲ್ಲದಕ್ಕೂ ಕಾಯಬೇಕಾಗತೈತಿ. ಆದ್ರ

ಕಾಯಕೊಂತ ಕುಂಡ್ರದ ಕಾಯದ ಅನ್ನೋದು ಭಾಳ ಮಂದಿ ತಲೀ ಒಳಗ ಹೋಗಂಗಿಲ್ಲ. ಬೀಸೂ ಗಾಳಿ ಒಳಗ ಹೂವಿನ ವಾಸನಿ; ಸಾವಿನ ವಾಸನಿ ಎರಡೂ ಇರತಾವು. ಉಸುರು ಎಳಕೊಂಡ್ರ ಹೂವಿನ ವಾಸನಿ, ನಿಂದ್ರಿಸಿದರ ಸಾವಿನ ವಾಸನಿ, ಅಂತ ತಿಳಿಕೊಳ್ಳುವಷ್ಟು ವಿಚಾರ ಇಲ್ಲದ ಬುದ್ದಿಗೇಡಿ ಜಗತ್ತಿದು" [10] ಎಂದು ಹೇಳುತ್ತಾನೆ. ಸಾಧನೆಗೆ ತಾಳ್ಮೆ ಬೇಕು ಆಗ ಅದು ಸಾಧ್ಯವಾಗುವುದು ಎನ್ನುವ ಅರ್ಥ ಇಲ್ಲಿದೆ. ಈ ಪರಿಭಾಷೆ ರುಕುಮವ್ವಗ ಅರ್ಥವಾಗುವುದಿಲ್ಲ ತಿಳಿಯುವ ಹಾಗೆ ಹೇಳು ಅಂತ ಅವನಿಗೆ ಕೇಳುತ್ತಾಳೆ. ಗುರುವಿನೊಂದಿಗಿನ ಸಂವಾದ ಬಹುಮುಖ್ಯವಾಗುತ್ತದೆ. ಇಲ್ಲಿ ರುಕುಮ್ಮವ್ವಗೆ ಇವನೆ ಗುರುವಾಗುತ್ತಾನೆ. ತನ್ನ ಅನುಭದಿಂದಲೇ ಸಾಧಕಳಂತೆ ಕಾಣುವ ರುಕ್ಕುಮವ್ವ ಹೇಳುವ ಮಾತುಗಳು ಆಧ್ಯಾತ್ಮಿಕತೆಯ ತಾತ್ವಿಕತೆಯಿಂದ ಕೂಡಿದ್ದಾಗಿವೆ. ರುಕುಮವ್ವ, ಮೌನೇಶ್ವರನೊಂದಿಗೆ ಸಿಟ್ಟು ಮಾಡಿಕೊಂಡು ಜಗಳಕ್ಕೆ ಇಳಿದಿದ್ದಳು ಹೀಗೆ ಜಗಳಕ್ಕೆ ಇಳಿಯುವುದು ಸಾಧಕರಿಗೆ ಮಾತ್ರ ಸಾಧ್ಯ. ತಾತ್ವಿಕ, ವೈಯಕ್ತಿಕ ಜಗಳಗಳು. ಇಂತಹ ಜಗಳಗಳು ಸಾಂಸ್ಕೃತಿಕ ವಾಗ್ವಾದವನ್ನು ಉಂಟುಮಾಡುತ್ತದೆ.

"ಅದಕೇನ ಮಗಳ, ನರಜಲ್ಮ ಅನ್ನೋದು. ಅದನ್ನು ತಿಳಿದುಕೊಂಡು ಬಾಳುವೇ ಮಾಡದಿದ್ರ ನಾಯಿಗಳಾಗತೇವಿ, ದೇವರು ತ್ರಾಸ ಮನುಷ್ಯಾರಿಗೆ ಕೊಡಾಂವ. ಕಲ್ಲಿಗಲ್ಲ. ಕಲ್ಲಿಗೆ ಏಟು ಹಾಕಿದ್ರ ಬಸವಣ್ಣ ಆಗತೈತಿ. ಮನುಷ್ಯಾಗ? ಜೀವ ಹಣ್ಣಾಗಿ ಬುದ್ದಿ ಭೆಟ್ಟಿ ಆಗತೈತಿ"[11] ಎನ್ನುವ ಅವಳ ಮಾತು ಚಂದ್ರವ್ವನ ಮೇಲೆ ಅಪಾರವಾದ ಪರಿಣಾಮ ಬೀರುತ್ತದೆ.

'ಬಾರೋ ಗೀಜುಗ' ಕಥೆಯಲ್ಲಿ ಈ ನೆಲೆ ಸಾಧ್ಯವಾಗುವುದು ಬೌದ್ಧಿಕ ಸಂವಾದದ ಮೂಲಕ. ಪ್ರೊಫೆಸರ್ ಕದಂ ಹಾಗೂ ನೀಲಾಂಜನೆಯರ ನಡುವೆ ನಡೆಯುವ ಸಂವಾದ ಅನುಭವಾತ್ಮಕವಾಗಿದ್ದು, ಹಣ್ಣು ಪಕ್ವವಾಗಿ ಕಳಚಿ ಬಿಳಲು ಸೂಕ್ತ ಸಮಯಕ್ಕಾಗಿ ಪ್ರಯತ್ನಿಸುತ್ತಿರುತ್ತದೆ. ಅಂತಹ ಸಮಯ ಇವರಿಬ್ಬರ ಸಂಗಮದಿಂದಾಗುತ್ತದೆ. ಹಾಡು, ಬದುಕು ಬೇರೆ ಬೇರೆಯೇ? ಹೊರಗಿನಿಂದ ನೋಡಿದಾಗ ಹಾಡಿನ ಮಾಧುರ, ಬದುಕಿನ ಬವಣೆ ಬೇರೆ ಬೇರೆಯಾಗಿಯೇ ಕಾಣುತ್ತವೆ. ಆದರೆ ಹಾಡಿಗೆ ಬದುಕನ್ನು ತನ್ನ ರಾಗಕ್ಕೆ ಹೊಂದಿಸಿಕೊಳ್ಳುವ ತವಕ; ಬದುಕಿನ ಬವಣೆ ಮೀರಿ ಬರಿ ಹಾಡಾಗುವ ಆಶಯ ಇದ್ದೆ ಇರುತ್ತದೆ. ನಿಮ್ಮ ದೇವಭೂಮಿಯ ಬೆಟ್ಟ–ನೀರಿನ ಸಂಬಂಧವನ್ನೆ ನೋಡಿ. ಬೆಟ್ಟ–ಕಣಿವೆಯ ಕಲ್ಲು ಇದ್ದಲ್ಲೇ ಸ್ಥಾವರವಾಗಿದ್ದರೂ, ನೂರಾರು ವರ್ಷಗಳಿಂದ ಜಂಗಮ ಜಲದ ಸಾನಿಧ್ಯ ಪಡೆಯುತ್ತಲೇ ಬಂದಿದೆ. ಅವೆರಡರ ಸಾಂಗತ್ಯ ಆ ಕ್ಷಣದಲ್ಲಿ ನಿಜವಾಗು ವಂಥದ್ದು. ಆದರೆ ಆ ಕ್ಷಣದಲ್ಲಿ ಪಡೆಯುವ ಬಗೆ ಮಾತ್ರ ನಿರಂತರವಾಗಿದೆ ಎನ್ನುವುದು ಆ ಪ್ರಾಕೃತಿಕ ಪರಿಸರದಲ್ಲಿ ಅವನು ವಿಶೇಷ ಅರಿವು ಪಡೆಯುವು ದಾಗಿದೆ. ಅವನ ಸಿದ್ದಿಗೆ ಇದು ಕಾರಣ ಮಾತ್ರ. ಅವನು ಮೇಲಿನ ಎಲ್ಲ ನೆಲೆಗಳನ್ನು ಸಾಧಿಸಿದ್ದಾನೆ. ಇಲ್ಲಿ ಕದಂ ಹರಿಯುವ ನದಿಯಾಗಿದ್ದರೆ, ನೀಲಾಂಜನೆ ಅದರ ಸಾನಿಧ್ಯ ಪಡೆದ ಕಲ್ಲಾಗಿದ್ದಾಳೆ. ಅದು ಮೂಲ ಸ್ವರೂಪದಲ್ಲಿದ್ದರು ಜಂಗಮ ಜಲದಿಂದ ದಿನಾಲೂ ಹೊಸ ಅರಿವನ್ನು ಪಡೆದು ಮೃದು ಮತ್ತು ತೀಕ್ಷ್ಣವಾಗುತ್ತಿರುತ್ತದೆ. ಕಠಿಣ ದೇಹದಂಡನೆಯಲ್ಲಿ ನಿರತನಾದ ಸಾಧುವಿಗಿಂತ ಸರಳ, ಮುಗ್ಧ ಗೋಪಿಕೆಯರಿಗೆ ಸಾಕ್ಷಾತ್ಕಾರ ನೀಡುವ ದೇವೋತ್ತಮ ಪರಮ ಪುರಷನ ಲಕ್ಷ್ಯ, ಒತ್ತು ಯಾವ ಕಡೆ ಇದೆ ಎಂದು ನಾವು ಹುಡಕಬೇಕಿದೆ ಎನ್ನುವ ಅನ್ವೇಷಾಣಾತ್ಮಕ ಮಾತು, ಸಾಧನೆಗೆ ನಿರ್ದಿಷ್ಟ ಪಥವಿಲ್ಲ ಹೀಗಾಗಿ ಯಾವುದಾದರೂ ಮಾರ್ಗದ ಮೂಲಕ ಸಾಧಿಸಬಹುದು ಎಂಬ ಹೊಸ ದಾರಿಯ ಪ್ರಯತ್ನ ಇಲ್ಲಿ ಕಾಣುತ್ತದೆ. "ಹಕ್ಕಿಯೊಂದು ರಭಸದಿಂದ ಹಾರುತ್ತ, ಅಲುಗಾಡಿ ಕಾಲೂರಿ ನಿಂತಂತೆ ಪಕ್ಕ ನಿಂತಳು. ಬಯಲು ನೋಡತ್ತ ಇಬ್ಬರೂ ಬಯಲಾದರು"[12] ಎನ್ನುವದು ಅವರು 'ಸಂತ'ತನದ ಉನ್ನತ ನೆಲೆಯನ್ನು ತಲುಪಿದರು ಎಂಬುದರ ಸೂಚನೆಯಾಗಿದೆ. ಹೀಗೆ ಬಯಲಾಗುವುದರ ಬಗ್ಗೆ ಕದಂ ಅವರಿಗೆ

ಅನುಮಾನಗಳಿವೆ ಹಾಗಾಗಿ "ನಿಜವೆಂದರೆ ಬಯಲಾಗುವುದು ಮುಕ್ತಿಯ ದಾರಿಯಾಗಲಾರದು. ಅದು ಒಂದು ರೂಕ್ಷ ಜಗತ್ತಿನಿಂದ, ಇನ್ನೊಂದು ಪರಮ ರೂಕ್ಷ ಜಗತ್ತಿನೊಳಗೆ ನನ್ನನ್ನು ನೂಕುತ್ತದಷ್ಟೆ. ಬಯಲಿನ ಬಯಕೆಯ ಬದುಕು, ಇದರ ನೆನಪು ಇಡೀ ಜೀವನ ಕರುಳಿನಲ್ಲಿ ವಿಷದಂತೆ ಸಿಲುಕಿ ಸಾಯಿಸುತ್ತದೆ. ಇದು ಆಗುವಿಕೆಯನ್ನು ಸೂಚಿಸುತ್ತದೆ. 'ಕನ್ಯಾಗತ' ಕಥೆಯ ವಾಸುದೇವ ಈ ನೆಲೆಯನ್ನು ಪಡೆಯುವುದು ಸಂಪತ್ತಿನ ನಿರಾಕರಣೆಯಿಂದ. ಹಲವಾರು ಕಾರಣಕ್ಕೆ ನೊಂದ ಜೀವವಾಗಿದ್ದ ಅವನು 'ಚಿಂತ್ಯಾಕ ಮಾಡತಿ ಚಿನ್ನಯನಿದ್ದಾನೆ ಚಿಂತರತ್ನವೆಂಬ ಅನಂತನಿದ್ದಾನೆ' ಎಂಬ ತತ್ವದಿಂದ ಹೊಸ ಹಾದಿಯನ್ನು ಹಿಡಿಯುತ್ತಾನೆ. "ಏನೂ ಘಾಬರಿ ಮಾಡಕೋ ಬ್ಯಾಡ ರಾಘಪ್ಪನ ಸೇವಾ ಮಾಡು. ಅಂವಾ ದಡಾ ಮುಟ್ಟಿಸತಾನ"[13] ಎನ್ನುವ ಹಿರಿಯರ ಮಾರ್ಗದರ್ಶನ ಅವನನ್ನು ಬೀಜ ಕಾಯಾಗುವ ಹಂತಕ್ಕೆ ತರುತ್ತದೆ. ತನ್ನ ಪಿತ್ರಾರ್ಜಿತ ಆಸ್ತಿಯಾದ ಬಂಗಾರ ಒಡವೆಯ ಗಂಟು ಅವನಿಗೆ ಸಿಕ್ಕಾಗ ಬಹಳಷ್ಟು ತಳಮಳಕ್ಕೆ ಒಳಗಾಗುತ್ತಾನೆ. ಇದು ಸಂತನ ತಳಮಳವಾಗಿರುತ್ತದೆ. ಹಾಗಾಗಿ ಆ ಗಂಟನ್ನು "ಕೃಷ್ಣಾ, ಕೃಷ್ಣವೇಣಿ, ಅಪ್ಪಾ! ಕೃಷ್ಣ ವಾಸುದೇವಾ, ನನಗ ಯಾವ ಪಾಲೂ ಬ್ಯಾಡ ಮಾರಾಯಾರಾ! ನಾನು ಸಂಸಾರದಿಂದ ಮೋಕಳೀಕ ಆಗೀನಿ. ಮತ್ತೆಂದೂ ಈ ಕಡೆ ತಲೆ ಹಾಕೂದಿಲ್ಲ. ಈಕಾ! ನನ್ನ ತರ್ಪಣ, ಕೃಷ್ಣಾರ್ಪಣ ಎನ್ನುತ ನೀರಿಗೆ ಹಾಕುತ್ತಾನೆ."[14] ಅಲ್ಲಿ ಸಂಪತ್ತಿನ ನಿರಾಕರಣೆ ಇದೆ. ಅದು ಉಂಟುಮಾಡುವ ನೋವಿನ ಬಗೆಗೆ ಅವನಿಗೆ ಅರಿವಿದೆ. ಆ ಆಸ್ತಿಯಾಗಿ ತನ್ನ ಕುಟುಂಬದವರು ನಡೆದುಕೊಂಡು ರೀತಿಗಳನ್ನು ನೆನೆಸಿಕೊಂಡು ನಗುತ್ತಾನೆ. "ಒಜ್ಜೆಯ ಗಂಟು ಒಳಗಿಳಿದಂತೆ ಗುಳುಗುಳು ಶಬ್ದ ಕೇಳಿತು. ಹಳೆಯ ಬದುಕಿನ ಕಥೆ ಮುಗಿಯಿತು. ಇನ್ನೇನಿದ್ದರೂ ಹೊಸ ತಿರುವು ಎಂಬಂತೆ ನದಿ ಅರೆಚಣ ಸ್ತಬ್ದ ವಾಯಿತು. ಮತ್ತೆ ಹೊಸ ನೀರಿನೊಂದಿಗೆ ಹರಿಯತೊಡಗಿತು"[15] ಇದು ಅವನ ವ್ಯಕ್ತಿತ್ವ ರೂಪಕವಾಗಿದೆ. ಒಜ್ಜೆಯ ಗಂಟು ಅಂದರೆ ಸಂಸಾರದಿಂದ ವಿಮುಖನಾಗಿ ಹೊಸ ದಾರಿಯನ್ನು ಅವನು ಹಿಡಿಯುತ್ತಾನೆ. ಎಲ್ಲ ಬಂಧನಗಳಿಂದ ಮುಕ್ತನಾಗಿ ಹೊಸ ನೀರಿನಂತೆ ಹರಿಯುತ್ತಾನೆ. ಗಂಟು ಅವನಿಗೆ ಸುಖ ತಂದು ಕೊಡುತಿತ್ತು ಆದರೆ ಇದನ್ನು ಮೀರಿದ ಇನ್ನೊಂದು ಆನಂದವಿದೆ ಎಂಬ ಅರಿವು ಅವನ ಆಳದಲ್ಲಿದೆ.

ಈ ಸಾಧಿತ ನೆಲೆಯು ಆತ್ಮ ಸಾಕ್ಷತ್ಕಾರವಾಗುವ ನೆಲೆಯಾಗಿದೆ. ಒಂದು ವ್ಯಕ್ತಿತ್ವ ಸಾಮಾಜಿಕ ಮತ್ತು ಆಧ್ಯಾತ್ಮಿಕದ ಉನ್ನತ ಸ್ಥರವನ್ನು ತಲುಪಿಸುತ್ತದೆ. ಈ ರೀತಿಯ ಅರಿವಿನ ಸ್ಫೋಟದಿಂದಾಗಿ ಹೊಸ ಲೋಕವೊಂದು ಇಲ್ಲಿ ತೆರೆದುಕೊಂಡಿರುತ್ತದೆ. ಅಲೌಕಿಕ ಚಿಂತನೆಗಳ ಮೂಲಕ ಲೌಕಿಕವಾದ ಸುಧಾರಣೆಗಳನ್ನು ಬಯಸುವ ವ್ಯಕ್ತಿತ್ವ ಇಲ್ಲಿ ರೂಪಗೊಂಡಿರುತ್ತದೆ. ವೈಯಕ್ತಿಕ ಪರಿವರ್ತನೆ ನಂತರ ಸಾಮಾಜಿಕ ಸ್ವರೂಪ ಪಡೆದುಕೊಳ್ಳುತ್ತದೆ. ಅಹಂಕಾರ ನಿರಸನಗೊಂಡು ಪೂರ್ವಸ್ಥಿತಿ ಮುರಿದು ಬಿದ್ದು ಬೆಂಕಿಯಲ್ಲಿ ಅರಳಿದ ಹೂವಿನಂತೆ ಶಕ್ತಿಯುತವಾಗಿರುತ್ತದೆ. ಭಕ್ತಿಯನ್ನು ತನ್ನ ಮೂಲ ಸಾಧನವಾಗಿಸಿಕೊಳ್ಳುತ್ತದೆ. ಭಕ್ತಿ ಎಂದರೆ ಪ್ರೇಮ, ಮನುಷ್ಯ ಪ್ರೇಮದ ವಿವಿಧ ಅಂಶಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ. ತನ್ನೊಳಗೆ ಉನ್ನತವಾದ ಅರಿವೊಂದು ಘಟಿಸಿದೆ ಎಂಬ ಅರಿವು ಈ ಹಂತದ ವ್ಯಕ್ತಿತ್ವಗಳಲ್ಲಿ ಇರುತ್ತದೆ. ಒಟ್ಟಾರೆ ಈ ಕಥಾಸಂಕಲನವು ಆಧ್ಯಾತ್ಮಿಕ ನೆಲೆ ಹಾಗೂ ಲೌಕಿಕ ನೆಲೆಯನ್ನು ಒಳಗೊಂಡ ಭಿನ್ನ ಸ್ವರೂಪದ ಮನುಷ್ಯಚೇತನದ ನೆಲೆಯೊಂದನ್ನು ಕಟ್ಟಿಕೊಡುತ್ತದೆ.

**ಕೊನೆಟಿಪ್ಪಣಿಗಳು**

1.ಕೇಶವ ಮಳಗಿ. *ಅಕಥ ಕಥಾ.* ಪುಟ.10

2.ಅದೇ. ಪುಟ.12

3.ಅದೇ. ಪುಟ. 15

4.ಅದೇ. ಪುಟ. 15

5.ಅದೇ. ಪುಟ. 16

6.ಅದೇ. ಪುಟ. 16

7.ಅದೇ. ಪುಟ. 16

8.ಅದೇ. ಪುಟ. 55

9.ಅದೇ. ಪುಟ. 32

10.ಅದೇ. ಪುಟ. 60

11.ಅದೇ. ಪುಟ. 67

12.ಅದೇ. ಪುಟ. 111

13.ಅದೇ. ಪುಟ. 127

14.ಅದೇ. ಪುಟ. 133

15.ಅದೇ. ಪುಟ. 132

**ಪರಾಮರ್ಶನ ಗ್ರಂಥ**


- ಅಮೂರ, ಜಿ.ಎಸ್. (2012). *ಕನ್ನಡ ಕಥನ ಸಾಹಿತ್ಯ: ಸಣ್ಣಕತೆ.* ಪ್ರಿಯದರ್ಶಿನಿ ಪ್ರಕಾಶನ.
- ಭೈರಪ್ಪ, ಎಸ್.ಎಸ್. (1969). *ಕಥೆ ಮತ್ತು ಕಥಾ ವಸ್ತು.* ಸಾಹಿತ್ಯ ಭಂಡಾರ.
- ಕೇಶವ ಮಳಗಿ. (2020). *ಅ ಕಥ ಕಥಾ.* ಸಂಗಾತ ಪುಸ್ತಕ ಪ್ರಕಾಶನ.